# ನಿಮ್ಮೊಡನೆ

ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಅನುಷ್ಠಾನದ ಜಾರಿಗೆ ಉನ್ನತಾಧಿಕಾರದ ಸಮಿತಿಯನ್ನೂ ನೇಮಿಸಲಾಗಿದೆ. ಈಗ ವಿಶೇಷ ಸ್ಥಾನಮಾನದ ಅಡಿಯಲ್ಲಿ ಕೇಂದ್ರ ಸರಕಾರದಿಂದಲೂ ಸಾಕಷ್ಟು ಹೆಚ್ಚುವರಿ ಅನುದಾನ ಬಿಡುಗಡೆಯಾಗಲಿದೆ. ಇಷ್ಟೆಲ್ಲ ಆಗಿರುವಾಗ ಮತ್ತೆ ಪ್ರತ್ಯೇಕತೆಯ ವಿಚಾರ ಎತ್ತುವುದು ಮೂರ್ಖತನವೆಂದೇ ಹೇಳಬೇಕು.


ವಿಷ್ಣು

## ಕರ್ನಾಟಕವನ್ನು ಒಡೆಯುವುದೆ?

‘2020ರ ವೇಳೆಗೆ ದೇಶದಲ್ಲಿ ಒಟ್ಟು 50 ರಾಜ್ಯಗಳು ಆಗಲಿವೆ; ಆಗ ಗುಲ್ಬರ್ಗ ವಿಭಾಗ ಮತ್ತು ಗೋವಾ ಜತೆಗೆ ಸೇರಿ ಉತ್ತರ ಕರ್ನಾಟಕವೂ ಪ್ರತ್ಯೇಕ ರಾಜ್ಯವಾಗಬಹುದು’ ಎಂದು ಕೃಷಿ ಸಚಿವ ಉಮೇಶ ಕತ್ತಿಯವರು ಹೇಳಿದ ಮಾತೊಂದು ಪರ–ವಿರೋಧ ಪ್ರತಿಭಟನೆಗಳಿಗೆ ಕಾರಣವಾಗಿದೆ. ‘ಕರ್ನಾಟಕವನ್ನು ಒಡೆಯುವುದು ಎಂದಿಗೂ ಸಲ್ಲದ ಮಾತು’ ಎಂದು ಬುದ್ಧಿಜೀವಿ ವರ್ಗದಿಂದ ಹಾಗೂ ಕನ್ನಡ ಹೋರಾಟಗಾರರಿಂದ ಗಟ್ಟಿ ಗಂಟಲಿನ ಪ್ರತಿಭಟನೆ ಬಂದಾಗ ಒಮ್ಮೆ ತಮ್ಮ ಮಾತಿನಿಂದ ಹಿಂದೆ ಸರಿದ ಸಚಿವರು, ಮರುದಿನ ಅದೇ ರಾಗ ಹಾಡಿದರು. ‘ತಜ್ಞರು ಹಾಗೆಂದು ಹೇಳಿದ್ದಾರೆ. ಅದನ್ನೇ ನಾನು ಉಲ್ಲೇಖಿಸಿದೆ’ ಎನ್ನುವುದು ಅವರ ವಾದ.

‘ಸಣ್ಣ ರಾಜ್ಯಗಳಾದಷ್ಟೂ ಅಭಿವೃದ್ಧಿಗೆ ಅನುಕೂಲ; ರಾಜ್ಯದ ಪ್ರತಿಯೊಂದು ಜಿಲ್ಲೆಯೂ ಸಮಾನ ಅಭಿವೃದ್ಧಿಯನ್ನು ಕಾಣುತ್ತದೆ’ ಎನ್ನುವ ವಾದ ಇಂದು ನಿನ್ನೆಯದಲ್ಲ. ಭೌಗೋಳಿಕವಾಗಿ ಅತ್ಯಂತ ದೊಡ್ಡ ದೇಶದಲ್ಲಿ ಅಭಿವೃದ್ಧಿಯ ಫಲಾಫಲಗಳು ಎಲ್ಲ ರಾಜ್ಯಗಳಲ್ಲೂ ಏಕರೂಪವಾಗಿ ಹಂಚಿಹೋಗಬೇಕೆಂಬುದು ಒಳ್ಳೆಯ ಉದ್ದೇಶವೇ. 1956ರಲ್ಲಿ ಮೊದಲ ಬಾರಿಗೆ ಭಾಷೆ, ಸಂಸ್ಕೃತಿಯ ಆಧಾರದಲ್ಲಿ ರಾಜ್ಯಗಳ ಪುನರ್‌ವಿಂಗಡಣೆಯಾದ ಬಳಿಕ, ಎಲ್ಲ ರಾಜ್ಯಗಳಲ್ಲೂ ಅಭಿವೃದ್ಧಿಯ ಹೊಸ ನೀಲನಕ್ಷೆಗಳು ತಯಾರಾದವು. ಆದರೆ ಉತ್ತರ ಪ್ರದೇಶದಂತಹ ಕೆಲವು ರಾಜ್ಯಗಳು ಇನ್ನೂ ದೊಡ್ಡದೇ ಆಗಿ ಉಳಿದಾಗ, ಅವುಗಳನ್ನು ಮತ್ತೆ ವಿಭಜಿಸಬೇಕೆಂಬ ಕೂಗು ಎದ್ದಿತು. ಅದರಂತೆ ಉತ್ತರಪ್ರದೇಶವನ್ನು ವಿಭಜಿಸಿ ಮತ್ತೆ ಮೂರು ರಾಜ್ಯಗಳನ್ನು ರಚಿಸಲಾಯಿತು. ಮಹಾರಾಷ್ಟ್ರದಲ್ಲಿ ವಿದರ್ಭ ಹಾಗೂ ಆಂಧ್ರಪ್ರದೇಶದಲ್ಲಿ ತೆಲಂಗಾಣ ಪ್ರತ್ಯೇಕ ರಾಜ್ಯಗಳಾಗಬೇಕೆಂಬ ಕೂಗು ಈಗಲೂ ಕೇಳಿಬರುತ್ತಿದೆ. ತೆಲಂಗಾಣದ ಪ್ರತ್ಯೇಕತೆಯ ಹೋರಾಟವಂತೂ ಕಗ್ಗಂಟಾಗಿ ಕೂತಿದೆ.

ಕರ್ನಾಟಕವನ್ನೂ ಒಡೆದು ಪ್ರತ್ಯೇಕ ರಾಜ್ಯಗಳನ್ನು ಮಾಡಬೇಕೆಂಬ ಕೂಗು ಹಳೆಯದೇ. ‘ಹೈದರಾಬಾದ್ ಕರ್ನಾಟಕ’ ಪ್ರತ್ಯೇಕ ರಾಜ್ಯವಾಗಬೇಕೆಂಬ ಆಗ್ರಹ 2001ರಿಂದಲೇ ಗಟ್ಟಿಯಾಗಿ ಕೇಳಿಬರುತ್ತಿದ್ದು, ಏಳೆಂಟು ವರ್ಷಗಳ ಕಾಲ ಪ್ರತ್ಯೇಕ ರಾಜ್ಯದ ಧ್ವಜಾರೋಹಣವನ್ನೂ ನಡೆಸಲಾಯಿತು. ಆದರೆ ಈ ವರ್ಷ ಕೇಂದ್ರ ಸರಕಾರವು ಸಂವಿಧಾನದ 371ನೇ ವಿಧಿಗೆ ಸೂಕ್ತ ತಿದ್ದುಪಡಿ ಮಾಡಿ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ನೀಡಿದ ಬಳಿಕ ಆ ಭಾಗದಿಂದ ಪ್ರತ್ಯೇಕ ರಾಜ್ಯದ ಕೂಗು ಕ್ಷೀಣಿಸಿದೆ. ಅದಕ್ಕಾಗಿ ಹೋರಾಟ ನಡೆಸುತ್ತಿದ್ದವರು ಸದ್ಯಕ್ಕಂತೂ ಖುಷಿಯಾಗಿದ್ದಾರೆ. 2007ರಲ್ಲಿ ರಾಜ್ಯೋತ್ಸವವನ್ನು ಬಹಿಷ್ಕರಿಸಿ ಕೊಡಗು ಜಿಲ್ಲೆಯಾದ್ಯಂತ ಬಂದ್ ನಡೆದಿತ್ತು. ಪ್ರತ್ಯೇಕ ರಾಜ್ಯ ಬೇಕೆಂದು ಕೊಡವರು ಅದಕ್ಕೂ ಮುನ್ನವೇ ಕೂಗು ಹಾಕಿದ್ದರು. ಕೊಡಗಿನಲ್ಲಿ ಜಮ್ಮಾ ಬಾಣೆ ಜಮೀನಿನ ವಿವಾದ ತಾರಕಕ್ಕೆ ಏರಿದಾಗ, ಪ್ರತ್ಯೇಕ ರಾಜ್ಯದ ಕೂಗಿಗೆ ಇನ್ನಷ್ಟು ಬಲ ಬಂದಿತ್ತು. ಆದರೆ ಜಮ್ಮಾ ಬಾಣೆ ಜಮೀನಿನ ವಿವಾದ ಪರಿಹಾರವಾದ ಬಳಿಕ ಅಲ್ಲಿಯ ಪ್ರತ್ಯೇಕತೆಯ ಕೂಗು ಕ್ಷೀಣಗೊಂಡಿದೆ.

ಇಂತಹ ಹೊತ್ತಲ್ಲಿ ಮತ್ತೆ ಕರ್ನಾಟಕ ಪ್ರತ್ಯೇಕವಾಗಲಿದೆ ಎಂಬ ಮಾತು ಏಕೆ ಬಂತು? ಅಭಿವೃದ್ಧಿಯ ಫಲ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಸಮನಾಗಿ ಹಂಚಿಕೆಯಾಗಿಲ್ಲ ಎನ್ನುವುದು ನಿಜವೇ. ಉತ್ತರ ಕರ್ನಾಟಕದ ಅಭಿವೃದ್ಧಿಯ ಅಸಮತೋಲನವನ್ನು ಸರಿ ಪಡಿಸಲೆಂದೇ ಎಂಟು ವರ್ಷಗಳ ಅವಧಿಯಲ್ಲಿ 31 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ನಿರ್ಧರಿಸಲಾಗಿದೆ. ಡಾ.ಡಿ.ಎಂ.ನಂಜುಂಡಪ್ಪ ಸಮಿತಿಯ ವರದಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಅನುಷ್ಠಾನದ ಜಾರಿಗೆ ಉನ್ನತಾಧಿಕಾರದ ಸಮಿತಿಯನ್ನೂ ನೇಮಿಸಲಾಗಿದೆ. ಈಗ ವಿಶೇಷ ಸ್ಥಾನಮಾನದ ಅಡಿಯಲ್ಲಿ ಕೇಂದ್ರ ಸರಕಾರದಿಂದಲೂ ಸಾಕಷ್ಟು ಹೆಚ್ಚುವರಿ ಅನುದಾನ ಬಿಡುಗಡೆಯಾಗಲಿದೆ. ಇಷ್ಟೆಲ್ಲ ಆಗಿರುವಾಗ ಮತ್ತೆ ಪ್ರತ್ಯೇಕತೆಯ ವಿಚಾರ ಎತ್ತುವುದು ಮೂರ್ಖತನವೆಂದೇ ಹೇಳಬೇಕು. ಕೋಟಿಗಟ್ಟಲೆ ಹಣ ಬಿಡುಗಡೆಯಾದ ಬಳಿಕವೂ ಉತ್ತರ ಕರ್ನಾಟಕದಲ್ಲಿ ಸರಿಯಾಗಿ ಅಭಿವೃದ್ಧಿ ಕ್ರಮಗಳು ಜಾರಿಯಾಗಲಿಲ್ಲ ಎಂದರೆ ಅದಕ್ಕೆ ಅಲ್ಲಿನ ರಾಜಕಾರಣಿಗಳು ಮತ್ತು ಅಧಿಕಾರಿಗಳೇ ಕಾರಣರಾಗುತ್ತಾರೆ.

ನಾಡು– ನುಡಿಯ ವಿಚಾರವನ್ನು ಕ್ಷುಲ್ಲಕ ರಾಜಕೀಯಗಳಿಗಾಗಿ ಬಳಸಲು ಯತ್ನಿಸುವುದು ಎಳ್ಳಷ್ಟೂ ಸರಿಯಲ್ಲ. ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಪ್ರತ್ಯೇಕತೆಯ ಅಪಸ್ವರವನ್ನು ಧಿಕ್ಕರಿಸಿ ಎಲ್ಲ ಕನ್ನಡಿಗರೂ ಒಂದೆಂಬ ಧ್ಯೇಯಕ್ಕೆ ಬದ್ಧರಾಗಬೇಕು. ಕನ್ನಡದ ಉಳಿವು ಮತ್ತು ಬೆಳವಣಿಗೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವತ್ತ ಗಮನ ಹರಿಸಬೇಕು.

■ ಬಿ.ಎಂ.ಹನೀಫ್